# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಲೆಕ್ಕ ಪತ್ರ ಸ್ಥಾಯಿ ಸಮಿತಿಯಲ್ಲಿ ದಿನಾಂಕ: 08-02-2017 ರಂದು ಮಧ್ಯಾಹ್ನ 3.00 ಗಂಟೆಗೆ ನಡೆದ ಸಭೆಯ ನಡವಳಿಗಳು

| ಕ್ರ. ಸಂ | ಹಾಜರಿದ್ದ ಸದಸ್ಯರು ಶ್ರೀಯುತರುಗಳಾದ | | ಹಾಜರಿದ್ದ ಅಧಿಕಾರಿಗಳು |
|---|---|---|---|
| 1. | ನೇತ್ರಾ ನಾರಾಯಣ್ | – ಅಧ್ಯಕ್ಷರು | ಮು.ಅ.(ರಸ್ತೆ ಮತ್ತು ಮೂಲಭೂತ ಸೌಕರ್ಯ) |
| 2. | ಸವಿತಾ ವಿ.ಕೃಷ್ಣ | – ಸದಸ್ಯರು | ಎಲ್ಲಾ ಕಾ.ಪಾ.ಅಭಿಯಂತರರುಗಳು |
| 3. | ಎನ್.ಉಮಾ | – ಸದಸ್ಯರು | |
| 4. | ರಾಧಮ್ಮ ವೆಂಕಟೇಶ್ | – ಸದಸ್ಯರು | |
| 5. | ಜಿ.ಬಾಲಕೃಷ್ಣನ್ | – ಸದಸ್ಯರು | |
| 6. | ವಿ.ಸುರೇಶ್ | – ಸದಸ್ಯರು | |
| 7. | ಹೆಚ್.ಕುಸುಮಾ | – ಸದಸ್ಯರು | |
| 8. | ಎಂ.ಮಾಲತಿ | – ಸದಸ್ಯರು | |
| 9. | ಎಂ.ಶಾಮಲ | – ಸದಸ್ಯರು | |
| 10. | ಕೆ.ವಿ.ರಾಜೇಂದ್ರಕುಮಾರ್ | – ಸದಸ್ಯರು | |
| 11. | ಎಂ.ಗೌತಮ್ ಕುಮಾರ್ | – ಸದಸ್ಯರು | |

(ಹಿಂದಿನ ಸಭೆಯ ನಡವಳಿಕೆಗಳನ್ನು ಓದಿ ದಾಖಲಿಸಿಕೊಳ್ಳಲಾಯಿತು)

ಲೆಕ್ಕ ಪತ್ರ ಸ್ಥಾಯಿ ಸಮಿತಿಯ ಅಧ್ಯಕ್ಷರು, ಸಭೆಯಲ್ಲಿ ಹಾಜರಿದ್ದ ಸ್ಥಾಯಿ ಸಮಿತಿಯ ಸದಸ್ಯರು ಹಾಗೂ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತ್ತಿಸುತ್ತಾ, ತಮ್ಮ ತಮ್ಮ ಪರಿಚಯ ಮಾಡಿಕೊಳ್ಳಲು ಕೋರಿದರು. ತತ್ಸಂಬಂಧವಾಗಿ ಸ್ಥಾಯಿ ಸಮಿತಿಯ ಸದಸ್ಯರು ಹಾಗೂ ಹಾಜರಿದ್ದ ಅಧಿಕಾರಿಗಳು ತಮ್ಮ ತಮ್ಮ ಪರಿಚಯವನ್ನು ಮಾಡಿಕೊಂಡರು.

ನಂತರ ಅಧ್ಯಕ್ಷರು ಹಾಜರಿದ್ದ ಅಧಿಕಾರಿಗಳಿಗೆ ಸದರಿ ಕಛೇರಿಗೆ ಸಂಬಂಧಿಸಿದಂತೆ 2006-07ನೇ ಸಾಲಿನಿಂದ 2013-14ನೇ ಸಾಲಿನವರೆಗಿನ ಲೆಕ್ಕಪರಿಶೋಧನಾ ವರದಿಯಲ್ಲಿ ಬಾಕಿ ಇರುವ ಕಂಡಿಕೆಗಳು, ಆಕ್ಷೇಪಣೆಯಲ್ಲಿಟ್ಟಿರುವ ಮೊತ್ತ ಮತ್ತು ವಸೂಲಾತಿ ಮೊತ್ತದ ಬಗ್ಗೆ ಹಾಗೂ ಸದರಿ ಸಾಲುಗಳಿಗೆ ಸಂಬಂಧಿಸಿದ ಲೆಕ್ಕ ಪರಿಶೋಧನಾ ವರದಿಗಳಿಗೆ ಅನುಸರಣಾ ವರದಿಯನ್ನು ಸಲ್ಲಿಸಿರುವ ಬಗ್ಗೆ ವಿವರವಾದ ಮಾಹಿತಿಯನ್ನು ಸಮಿತಿಗೆ ಸಲ್ಲಿಸಲು ಸೂಚಿಸಿದಾಗ, ಹಾಜರಿದ್ದ ಅಧಿಕಾರಿಗಳು ಈ ಬಗ್ಗೆ ಸ್ಪಷ್ಟ ಮಾಹಿತಿಯನ್ನು ನೀಡುವಲ್ಲಿ

ವಿಫಲರಾಗಿರುತ್ತಾರೆ ಈ ಬಗ್ಗೆ ಲಭ್ಯವಿರುವ ಕಡತವನ್ನು ಪರಿಶೀಲಿಸಲಾಗಿ ಸುಮಾರು ರೂ.28.00ಕೋಟಿ ಮೊತ್ತವು ವಸೂಲಾತಿಗೆ ಬಾಕಿ ಇರುವುದಾಗಿ ಕಂಡುಬಂದಿರುತ್ತದೆ. ಸದರಿ ಮೊತ್ತವನ್ನು ವಸೂಲು ಮಾಡಲು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರಾಗಲೀ/ಲೆಕ್ಕಾಧೀಕ್ಷಕರಾಗಲೀ ಇದುವರೆವಿಗೂ ಯಾವುದೇ ಕ್ರಮವನ್ನು ವಹಿಸದೇ ಇರುವುದು ಕಂಡುಬಂದಿದ್ದು, ಇದರಿಂದ ಹೆಚ್ಚು ಹೆಚ್ಚು ಮೊತ್ತವು ವಸೂಲಾತಿಗಾಗಿ ಬಾಕಿ ಇರುವುದಾಗಿ ತಿಳಿದುಬಂದಿರುತ್ತದೆ.

ನಂತರ ಅಧ್ಯಕ್ಷರು ಸದರಿ ಕಛೇರಿಯ ವ್ಯವಹಾರವನ್ನು ಯಾವ ಬ್ಯಾಂಕ್ ಖಾತೆಯ ಮೂಲಕ ನಿರ್ವಹಿಸಲಾಗುತ್ತಿದೆ ಈ ಬಗ್ಗೆ ವಿವರವನ್ನು ಒದಗಿಸಲು ಸೂಚಿಸಿದಾಗ, ಕರೆಂಟ್ ಅಕೌಂಟ್ ಮೂಲಕ ಹಣದ ವ್ಯವಹಾರವನ್ನು ನಡೆಸುತ್ತಿರುವುದಾಗಿ ತಿಳಿಸಿರುತ್ತಾರೆ. ಸದರಿ ಕಛೇರಿಯಲ್ಲಿ ಇನ್ನೂ ಚಾಲ್ತಿ ಖಾತೆಯಲ್ಲಿ ವ್ಯವಹರಿಸುತ್ತಿದ್ದು ಸದರಿ ಖಾತೆಗಳಲ್ಲಿ ಸುಮಾರು ರೂ.50.00ಕೋಟಿಗೂ ಅಧಿಕ ಮೊತ್ತವು ಜಮೆ ಆಗಿರುವುದಾಗಿ ಹಾಜರಿದ್ದ ಅಧಿಕಾರಿಗಳು ತಿಳಿಸಿದರು. ಚಾಲ್ತಿ ಖಾತೆಯಲ್ಲಿನ ಮೊತ್ತಕ್ಕೆ ಯಾವುದೇ ಬಡ್ಡಿಯನ್ನು ನೀಡುವುದಿಲ್ಲವಾದ್ದರಿಂಧ, ಪಾಲಿಕೆಗೆ ಆರ್ಥಿಕವಾಗಿ ನಷ್ಟ ಉಂಟಾಗುತ್ತಿರುವುದು ತಿಳಿದುಬಂದಿರುತ್ತದೆ.

ತದನಂತರ DULT ಯೋಜನೆ ಅಡಿಯಲ್ಲಿ ನೀಡಿರುವ ಹಣವನ್ನು ಯಾವ ಖಾತೆಯಲ್ಲಿ ಜಮೆ ಮಾಡಲಾಗಿರುತ್ತದೆ ಎಂಬುದರ ಮಾಹಿತಿಯನ್ನು ಕೇಳಲಾಗಿ, ಸದರಿ ಮೊತ್ತವನ್ನು ಕಾರ್ಯಪಾಲಕ ಅಭಿಯಂತರರು (ವಿಶೇಷ ವಿಭಾಗ ರಸ್ತೆ ಮೂಲಭೂತ ಸೌಕರ್ಯ) ರವರ ಚಾಲ್ತಿ ಖಾತೆಯಲ್ಲಿ ಜಮೆ ಮಾಡಿರುವುದಾಗಿ ತಿಳಿಸಿರುತ್ತಾರೆ. ಆದರೆ, ಸದರಿ ಮೊತ್ತವನ್ನು ಮುಖ್ಯ ಲೆಕ್ಕಾಧಿಕಾರಿಗಳ ಖಾತೆಗೆ ಜಮೆ ಮಾಡಬೇಕಾಗಿರುತ್ತದೆಂದು ತಿಳಿಸುತ್ತಾ, ಈ ಬಗ್ಗೆ ಕೂಡಲೇ ಅಗತ್ಯ ಕ್ರಮವನ್ನು ಕೈಗೊಳ್ಳಬೇಕೆಂದು ಸೂಚಿಸಲಾಯಿತು. ಅಲ್ಲದೆ FBAS ವ್ಯವಸ್ಥೆಯಲ್ಲಿ ಎಷ್ಟು ಬಿಲ್ಲುಗಳನ್ನು ದಾಖಲಿಸಲಾಗಿದೆ ಎಂಬುದರ ಮಾಹಿತಿ ಕೇಳಿದಾಗ, ಕಛೇರಿಯ ಲೆಕ್ಕಾಧೀಕ್ಷಕರಿಗೆ FBAS ವ್ಯವಸ್ಥೆಯ ಬಗ್ಗೆ ಮಾಹಿತಿಯೇ ಇಲ್ಲದಿರುವುದು ತಿಳಿದುಬಂದು, ಇನ್ನು ಮುಂದೆ ಎಲ್ಲಾ ಬಿಲ್ಲುಗಳನ್ನು FBAS ವ್ಯವಸ್ಥೆಯಲ್ಲಿ ದಾಖಲಿಸಲು ಸೂಚಿಸಲಾಯಿತು.

ನಂತರ ಸದಸ್ಯರಾದ ಶ್ರೀಯುತ ಗೌತಮ್ ಕುಮಾರ್ ರವರು ಮಾತನಾಡುತ್ತಾ ರಸ್ತೆ ಮೂಲಭೂತ ಸೌಕರ್ಯ ಕಛೇರಿ ವತಿಯಿಂದ ನಿರ್ವಹಿಸಲಾಗುತ್ತಿರುವ ಎಲ್ಲಾ ಕಾಮಗಾರಿಗಳ ಸಂಪೂರ್ಣ ವಿವರಗಳನ್ನು,

ಪಾವತಿಗೆ ಬಾಕಿ ಇರುವ ಬಿಲ್‌ಗಳ ವಿವರಗಳನ್ನು ಸಲ್ಲಿಸಲು ಸೂಚಿಸಿದರು. ಮುಂದುವರಿದು ಹೆಚ್.ಎಸ್.ಆರ್. ಲೇಔಟ್‌ನಲ್ಲಿ ಸೈಕಲ್ ಟ್ರಾಕ್ ನಿರ್ಮಾಣ ಕಾಮಗಾರಿಯನ್ನು ಕಾರ್ಯಪಾಲಕ ಅಭಿಯಂತರರು (ವಿಶೇಷ ವಿಭಾಗ ರಸ್ತೆ ಮೂಲಭೂತ ಸೌಕರ್ಯ) ವತಿಯಿಂದ ಕೈಗೊಳ್ಳಲು ಉದ್ದೇಶಿಸಿರುವುದು ತಿಳಿದುಬಂದಿದ್ದು, ಈಗಾಗಲೇ ಜಯನಗರದಲ್ಲಿ ಈ ಕಾಮಗಾರಿಯನ್ನು ನಿರ್ವಹಿಸಲಾಗಿದ್ದು, ಇದರಿಂದ ಯಾವುದೇ ಪ್ರಯೋಜನವಾಗುತ್ತಿರುವುದಿಲ್ಲವೆಂದು, ಆದ್ದರಿಂದ, ಸದರಿ ಕಾಮಗಾರಿಯನ್ನು ಕೈಗೊಳ್ಳುವ ಅವಶ್ಯಕತೆ ಇರುವುದಿಲ್ಲವೆಂದು, ಅನಾವಶ್ಯಕವಾಗಿ ಸಾರ್ವಜನಿಕ ಹಣವನ್ನು ದುಂದುವೆಚ್ಚ ಮಾಡದೇ ಸದರಿ ಮೊತ್ತವನ್ನು ಸಾರ್ವಜನಿಕವಾಗಿ ಉಪಯೋಗವಾಗುವಂತಹ ಕಾಮಗಾರಿಗಳಿಗೆ ವಿನಿಯೋಗಿಸಬೇಕೆಂದು, ಕೂಡಲೇ ಸದರಿ ಕಾಮಗಾರಿಯನ್ನು ಕೈಬಿಡಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿದರು.

ಸ್ಕೈ ವಾಕ್ ಕಾಮಗಾರಿಯ ಬಗ್ಗೆ ಮಾತನಾಡುತ್ತಾ ಮೆ: ಪ್ರಕಾಶ್ ಆರ್ಟ್ಸ್ ರವರಿಗೆ ಸ್ಕೈ ವಾಕ್ ನಿರ್ಮಿಸಲು ಗುತ್ತಿಗೆ ನೀಡಿರುವುದಾಗಿ ತಿಳಿದುಬಂದಿದ್ದು, ಸದರಿ ಸಂಸ್ಥೆಯು ಪಾಲಿಕೆಗೆ ರೂ.7.88ಕೋಟಿ ಜಾಹಿರಾತು ತೆರಿಗೆಯನ್ನು ಪಾವತಿಸಬೇಕಾಗಿದ್ದು ಹಾಗೂ ಪಾಲಿಕೆಯ ವಿರುದ್ದವಾಗಿ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದ್ದರೂ, ಸದರಿ ಸಂಸ್ಥೆಗೆ ಕಾಮಗಾರಿ ಗುತ್ತಿಗೆಯನ್ನು ನೀಡಿರುವುದರಿಂದ, ಅಧಿಕಾರಿಗಳು ಅಕ್ರಮದಲ್ಲಿ ಭಾಗಿಯಾಗಿರುವುದು ಕಂಡುಬಂದಿರುತ್ತದೆಂದು ಅಸಮಾಧಾನ ವ್ಯಕ್ತಪಡಿಸಿ ಕೂಡಲೇ ಸದರಿ ಗುತ್ತಿಗೆದಾರರರು ಪಾವತಿಸಬೇಕಾದ ತೆರಿಗೆಯನ್ನು ವಸೂಲು ಮಾಡಲು ಕ್ರಮ ಕೈಗೊಳ್ಳಬೇಕೆಂದು ಸೂಚಿಸಿ, ಈ ಬಗ್ಗೆ ಹಾಜರಿದ್ದ, ಕಾರ್ಯಪಾಲಕ ಅಭಿಯಂತರರು (ವಿಶೇಷ ವಿಭಾಗ ರಸ್ತೆ ಮೂಲಭೂತ ಸೌಕರ್ಯ) ರವರನ್ನು ಮಾಹಿತಿ ಕೇಳಲಾಗಿ ಸದರಿಯವರು ಸಮಿತಿಯು ಕೇಳಿದ ಯಾವುದೇ ಮಾಹಿತಿಯನ್ನು ಸಮರ್ಪಕವಾಗಿ ನೀಡದೆ ಬೇಜವಾಬ್ದಾರಿಯಿಂದ ಉತ್ತರಿಸಿರುತ್ತಾರೆ. ಇದಕ್ಕೆ ಅಧ್ಯಕ್ಷರು ಸಹ ಅಸಮಾಧಾನ ವ್ಯಕ್ತಪಡಿಸಿ ಸದರಿಯವರು ಸ್ಥಾಯಿ ಸಮಿತಿಯ ಸಭೆಗೆ ಅಗೌರವ ತೋರಿರುತ್ತಾರೆಂದು, ಈ ಕುರಿತು ಆಯುಕ್ತರವರಿಗೆ ಪತ್ರ ಬರೆಯಲು ಸೂಚಿಸಿದರು.

ನಂತರ ಹಾಜರಿದ್ದ ಕಾರ್ಯಪಾಲಕ ಅಭಿಯಂತರರುಗಳು ಮಾತನಾಡುತ್ತಾ ಸದರಿ ಕಛೇರಿಯ 08 ವಲಯಗಳಿಗೆ ಹಾಗೂ ವಿಶೇಷ ವಿಭಾಗ ಮತ್ತು ಟ್ರಾಫಿಕ್ ಇಂಜಿನಿಯರಿಂಗ್ ಸೆಲ್ ವಿಭಾಗಗಳಿಗೆ ಒಬ್ಬರು ಲೆಕ್ಕಾಧೀಕ್ಷಕರು ಹಾಗೂ ಒಬ್ಬರು ಪ್ರಥಮ ದರ್ಜೆ ಸಹಾಯಕರುಗಳ ಅವಶ್ಯಕತೆ ಇರುವುದಾಗಿ ತಿಳಿಸಿ, ಹಾಲಿ ಈ ಎಲ್ಲಾ ಕಛೇರಿಯ ಕೆಲಸ ಕಾರ್ಯಗಳನ್ನು ಒಬ್ಬರೆ ಪ್ರಥಮ ದರ್ಜೆ ಸಹಾಯಕರು

ನಿರ್ವಹಿಸುತ್ತಿರುತ್ತಾರೆಂದು, ಆದ್ದರಿಂದ, ಕೂಡಲೇ ಸದರಿ ಕಛೇರಿಯ ಎಲ್ಲಾ ವಲಯಗಳಿಗೂ ಒಬ್ಬರು ಲೆಕ್ಕಾಧೀಕ್ಷಕರು ಹಾಗೂ ಒಬ್ಬರು ಪ್ರಥಮ ದರ್ಜೆ ಸಹಾಯಕರನ್ನು ನಿಯೋಜಿಸಿಕೊಡುವಂತೆ ಕೋರಿದ್ದರ ಮೇರೆಗೆ, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ಸಂಬಂಧಪಟ್ಟವರಿಗೆ ಸೂಚಿಸುವುದಾಗಿ ಅಧ್ಯಕ್ಷರು ತಿಳಿಸಿದರು.

ಕೊನೆಯಲ್ಲಿ ಅಧ್ಯಕ್ಷರು ಮಾತನಾಡುತ್ತಾ, ಸಮಿತಿಯು ಕೋರಿರುವ ಮೇಲ್ಕಂಡ ಎಲ್ಲಾ ಮಾಹಿತಿಗಳನ್ನು ಒಂದು ವಾರದ ಒಳಗೆ ಸಮಿತಿಗೆ ಸಲ್ಲಿಸಲು ಸೂಚಿಸುತ್ತಾ, ಅಧಿಕಾರಿ/ಸಿಬ್ಬಂದಿಗಳು ಕಛೇರಿಯ ಲೆಕ್ಕಪತ್ರಗಳ ನಿರ್ವಹಣೆಯಲ್ಲಿ ಅಸಡ್ಡೆ ಮನೋಭಾವವನ್ನು ತೋರದೆ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕರ್ತವ್ಯವನ್ನು ನಿರ್ವಹಿಸಬೇಕೆಂದು, ಸಮಿತಿಯು ತಮ್ಮ ಕಛೇರಿಗೆ ಭೇಟಿ ನೀಡಿ ತಪಾಸಣೆ ಕೈಗೊಳ್ಳುವ ಸಂದರ್ಭದಲ್ಲಿ ಯಾವುದೇ ರೀತಿಯ ಲೋಪ ದೋಷಗಳು ಇಲ್ಲದಂತೆ ಎಲ್ಲಾ ಕಡತಗಳನ್ನು ನಿರ್ವಹಿಸಿರಲು ಸೂಚಿಸುತ್ತಾ ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಿದರು.

ಅಧ್ಯಕ್ಷರು
ಲೆಕ್ಕಪತ್ರ ಸ್ಥಾಯಿ ಸಮಿತಿ

**ಪ್ರತಿಯನ್ನು:**

1.ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ವಿಶೇಷ ಕರ್ತವ್ಯಾಧಿಕಾರಿ ರವರಿಗೆ ಕಳುಹಿಸಿದೆ.
2.ಮಾನ್ಯ ಉಪ ಮಹಾಪೌರ ರವರ ಅವಗಾಹನೆಗೆ ತರಲು ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸಿದೆ.
3.ಮಾನ್ಯ ಆಯುಕ್ತರು ರವರಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿದೆ.
4.ಮಾನ್ಯ ಆಡಳಿತ ಪಕ್ಷದ ನಾಯಕರಿಗೆ, ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ಜೆ.ಡಿ.ಎಸ್. ಪಕ್ಷದ ನಾಯಕರಿಗೆ ಮಾಹಿತಿಗಾಗಿ ಕಳುಹಿಸಿದೆ.
5.ಮುಖ್ಯ ಅಭಿಯಂತರರು, (ರಸ್ತೆ ಮೂಲಭೂತ ಸೌಕರ್ಯ) ರವರಿಗೆ ಕಳುಹಿಸುತ್ತಾ ಸಭೆಯಲ್ಲಿ ಚರ್ಚಿಸಿದಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ
6.ಕಾರ್ಯಪಾಲಕ ಅಭಿಯಂತರರು (ವಿಶೇಷ ವಿಭಾಗ ರಸ್ತೆ ಮೂಲಭೂತ ಸೌಕರ್ಯ) ರವರಿಗೆ ಕಳುಹಿಸುತ್ತಾ ಸಭೆಯಲ್ಲಿ ಚರ್ಚಿಸಿದಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ಸಮಿತಿಗೆ ವರದಿ ಸಲ್ಲಿಸಲು ಸೂಚಿಸಿದೆ
7.ಕಛೇರಿ ಕಡತಕ್ಕೆ